**6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.296/2018**

(ಪ್ರಾ.ಸಾ.10 / ಚಾ.ಸಾ.14)

ತಾಃ 21-08-2021 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | ಃ | ನಾಗಭೂಷಣ ರೆಡ್ಡಿ |
| ತಂದೆಯ ಹೆಸರು | ಃ | ಪೆದ್ದಣ್ಣ ರೆಡ್ಡಿ ಕೆ. |
| ವಯಸ್ಸು | ಃ | 52 ವರ್ಷ |
| ಉದ್ಯೋಗ | ಃ | ಟಿ.ವಿ. ರಿಪೇರಿ ಕೆಲಸ |
| ವಾಸ ಸ್ಥಳ | ಃ | ಹೆಚ್. ಕ್ರಾಸ್, ಹೊಸಕೋಟೆ-ಚಿಂತಾಮಣಿ ರಸ್ತೆ. |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ಸಾಕ್ಷಿಗೆ ನ್ಯಾಯಾಲಯದ ಮುಂದೆ ಇದ್ದ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸದರಿ ದಾಖಲೆಯು ಅಮಾನತ್ತು ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ-16 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ-16(ಬಿ) ಎಂದು ಗುರುತಿಸಲಾಯಿತು.

2. ಹೀಗೆ ಸುಮಾರು 2 ರಿಂದ 3 ವರ್ಷಗಳ ಹಿಂದೆ ಹೆಚ್.ಕ್ರಾಸ್‌ನಲ್ಲಿರುವ ಕವಿತಾ ಡಾಬಾದ ಹತ್ತಿರ ಸಹಿಯನ್ನು ಮಾಡಿರುತ್ತೇನೆ. ಆ ದಿನ ಪೋಲಿಸರು ತಾವು ಮಹಜರ್ ಮಾಡುವುದಾಗಿ ಅದಕ್ಕೆ ಸಹಿಯನ್ನು ಹಾಕು ಎಂದು ಹೇಳಿದ್ದು ಆದ ಕಾರಣ ನಾನು ಮಹಜರ್‌ಗೆ ಸಹಿಯನ್ನು ಮಾಡಿರುತ್ತೇನೆ. ಕೊಲೆ ಹಿನ್ನಲೆಯಲ್ಲಿ ಮಹಜರ್ ಮಾಡಲು ಬಂದಿರುತ್ತೇವೆ ಆದ ಕಾರಣ ಸಹಿ ಮಾಡಿ ಎಂದು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ. ಮಹಜರ್‌ನಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ,

ಕಾರಣ ಪೋಲಿಸರು ಮಹಜರ್‌ನಲ್ಲಿರುವ ಅಂಶಗಳನ್ನು ಓದಿ ಹೇಳಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ-**

ದಿನಾಂಕ 18-11-2017 ರಂದು ವೈಟ್‌ಫೀಲ್ಡ್ ಪೋಲಿಸರು ನನ್ನನ್ನು ಹಾಗೂ ಚಾಸಾ-15 ರವರನ್ನು ಕೊಲಂಬಿಯಾ ಏಷ್ಯಾ ಆಸ್ಪತ್ರೆ ತುರ್ತುನಿಗಾ ಘಟಕದ ಹತ್ತಿರ ಕರೆದುಕೊಂಡು ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಆರ್.ಬಿ. ರಮೇಶ್ ಮತ್ತು ಕವಿತಾರವರು ಇದ್ದು ಸದರಿಯವರನ್ನು ಪೋಲಿಸರು ವಿಚಾರಣೆ ಮಾಡಿದಾಗ ಆರ್.ಬಿ. ರಮೇಶ್ ಮತ್ತು ಕವಿತಾರವರು ತಿಳಿಸಿದ್ದೇನೆಂದರೆ, ಕೃತ್ಯ ನಡೆದ ಸಮಯದಲ್ಲಿ ತಾವು ಧರಿಸಿದ್ದ ಬಟ್ಟೆಗಳು ರಕ್ತ ಕಲೆಯಾಗಿರುತ್ತವೆ ಅವುಗಳನ್ನು ತೆಗೆದು ಆಸ್ಪತ್ರೆಯಲ್ಲಿ ಇಟ್ಟಿರುವುದಾಗಿ ಹೇಳಿ ತೋರಿಸಿದಾಗ ಮುಂದಿನ ಕ್ರಮಕ್ಕಾಗಿ ಗಾಯಾಳು ಆರ್.ಬಿ.ರಮೇಶ್‌ರವರಿಗೆ ಸಂಬಂಧಿಸಿದ ರಕ್ತ ಕಲೆಯಾದ ಬಟ್ಟೆಗಳು ಹಾಗೂ ಕವಿತಾರವರಿಗೆ ಸಂಬಂಧಿಸಿದ ರಕ್ತ ಕಲೆಯಾದ ಸೀರೆ, ಒಳಲಂಗ ಹಾಗೂ ಇತರೆ ಬಟ್ಟೆಗಳನ್ನು ನಮ್ಮ ಸಮಕ್ಷಮ ಮುಂದಿನ ಕ್ರಮಕ್ಕಾಗಿ ಅಮಾನತ್ತುಪಡಿಸಿಕೊಂಡು ಅವುಗಳನ್ನು ಬಿಳಿ ಬಟ್ಟೆಯಲ್ಲಿ ಪತ್ಯೇಕವಾಗಿ ಪ್ಯಾಕ್ ಮಾಡಿ ಎಸ್ ಎಂಬ ಅಕ್ಷರದಿಂದ ಸೀಲ್ ಮಾಡಿ ನಿಪಿ-16 ರಂತೆ ಆ ದಿನ ಈ ಮೇಲೆ ಹೇಳಿದ ಸ್ಥಳದಲ್ಲಿ ಬೆಳಿಗ್ಗೆ 8-30 ರಿಂದ 9-30 ಗಂಟೆವರೆಗೂ ಅಮಾನತ್ತು ಮಹಜರ್ ಮಾಡಿ ನಮಗೆ ಅದರಲ್ಲಿರುವ ಅಂಶಗಳನ್ನು ಓದಿ ಹೇಳಿದ ನಂತರ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

2. ನಿಪಿ-16 ರಂತೆ ಪಂಚನಾಮೆ ಸಂದರ್ಭದಲ್ಲಿ ಮೇಲೆ ಹೇಳಿದ ವಸ್ತುಗಳನ್ನು ಅಮಾನತ್ತು ಮಾಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ರಿಂದ 3, 5 ಮತ್ತು 6ನೇ ಆರೋಪಿತರ ಪರ ಶ್ರೀ.ಎಂ.ಪಿ. ವಕೀಲರಿಂದ ಃ**

ಆರೋಪಿತರ  ಪರ ವಕೀಲರು ಯಾವುದೇ ಪಾಟೀ-ಸವಾಲು ಇಲ್ಲ ಎಂದು ಹೇಳುತ್ತಾರೆ.

**ಪಾಟೀ ಸವಾಲುಃ 4ನೇ ಆರೋಪಿ ಪರ ಶ್ರೀಮತಿ.ಕೆ.ಸಿ.ಎಂ. ವಕೀಲರಿಂದ ಃ**

ಆರೋಪಿ ಪರ ವಕೀಲರು ಯಾವುದೇ ಪಾಟೀ-ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರುವಿಚಾರಣೆಃ** ಇಲ್ಲ

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ. ಹೇ. ಸಾ. ಸ. ಸಹಿ ಮಾಡಿದ್ದಾರೆ.

(ಚೆನ್ನಪ್ಪ ಗೌಡ)
6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.